ಭಾವನೆಯಲ್ಲಿ ಯಾವತ್ತೂ ಕಲ್ಲು ತುಂಬುವುದಿಲ್ಲ. ದೇವರ ದಯೆ ಅವಳು ಬದುಕಿದ್ದಾಳಲ್ಲ' ಎಂದಳು. ಎಂಥ ಪ್ರೇಮ ಅವಳದು... ಅವಳೊಬ್ಬ ದೇವತೆಯೇ ಸರಿ ಎಂದುಕೊಂಡು ಒಂದು ದಿನ ಅವಳ ಮನೆಯಲ್ಲಿ ತಂಗಿದ್ದು ಹೊರಟು ನಿಂತೆ. ಅಣ್ಣನ ಆಶ್ರಯದಲ್ಲಿ ಅವಳೆಷ್ಟು ಸುಖವಾಗಿರಬಹುದು ಎನ್ನುವುದನ್ನು ಆ ಮನೆಯನ್ನು ನೋಡಿಯೇ ಅಂದುಕೊಂಡೆ. ಅವಳಾವುದನ್ನೂ ಬಾಯಿ ಬಿಡದೆ ನನ್ನನ್ನು ಕಳುಹಿಸಿಕೊಟ್ಟಳು.

ನನ್ನ ಮಗಳು ಸೂರತ್ಕಲ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿ ಬೆಂಗಳೂರಿಗೆ ವಾಪಸ್ಸಾದಳು. ಅವಳ ಮದುವೆಯ ಸಿದ್ಧತೆಯಲ್ಲಿದ್ದೆ ನಾನು. ಅವಳ ಗಂಡನಾಗಲಿರುವವನು ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸದಲ್ಲಿದ್ದ. ನನ್ನ ಈ ಸಂಭ್ರಮದ ಸಮಯದಲ್ಲಿ ಹೊರಗೆ ಕಾರು ನಿಂತ ಸದ್ದು ಕೇಳಿಸಿತು. ಹೊರಗೆ ಬಂದು ನೋಡಿದೆ. ಕುಸುಮಾ ಗಂಡ ಮಗುವಿನ ಜೊತೆಗೆ ಬಂದಿದ್ದಾಳೆ. ಸಂತೋಷದ ಬದಲಿಗೆ ದುಃಖವಾಯ್ತು. ಅವಳು ಮದುವೆಗೆ ಬರುತ್ತಾಳೆ ಎಂದು ನಾನಂದುಕೊಂಡಿರಲಿಲ್ಲ. ಹೇಗೆ ಬರುತ್ತಾಳೆ. ಮಗಳು ಬೇರೆ ಬೆಳೆದು ಬಿಟ್ಟಿದ್ದಾಳೆ ಎಂದುಕೊಂಡಿದ್ದೆ. ಅದರೆ ಅವಳು ನನ್ನಮೇಲಿನ ಪ್ರೀತಿಯಿಂದ ಮದುವೆಗೆ ಬಂದಿದ್ದಳು. ಕಾರಿನಿಂದ ಮುನ್ನಾಳನ್ನು ಕೆಳಗಿಳಿಸಲು ನಾನು ಕಾರಿನ ಬಳಿಗೆ ಓಡಿದೆ. ಮೂರು ಜನ ಅವಳನ್ನು ಹೆಣವನ್ನು ಹೊತ್ತು ತಂದಂತೆ ತಂದು ವರಾಂಡದಲ್ಲಿ ಮಲಗಿಸಿದೆವು. ಮದನ ಬಂದವನು,

'ಮನೆಗೆ ಬರುವವರು ಬರುತ್ತಿರುತ್ತಾರೆ ಇಲ್ಲಿ ಬೇಡ ಒಳಕೋಣೆಯಲ್ಲಿ ಮಲಗಿಸೋಣ' ಎಂದು ಹೇಳಿದವನೆ, ತಾನು ಮುನ್ನಾಳನ್ನು ಎತ್ತಲು ನೆರವಾದ. ಮೂರು ಜನ ಸೇರಿ ಅವಳನ್ನು ಎತ್ತಿ ಒಳಕೋಣೆಯಲ್ಲಿ ಮಲಗಿಸಿದೆವು. ನನ್ನ ಮಗಳಿಗೆ ಕುಸುಮಾ ಮದುವೆಗೆ ಬಂದದ್ದು ಅದರಲ್ಲೂ ಮುನ್ನಾಳನ್ನು ಕರೆದುಕೊಂಡು ಬಂದಿರೋದು ತುಸು ಇರಿಸುಮುರಿಸನ್ನು ನೀಡಿತು. ಅವಳು ಗೊಣಗಿಕೊಂಡಾಗ 'ಹಾಗೆಲ್ಲಾ ಹೇಳಬಾರದು' ಎಂದು ಗದರಿದೆ.

ಕುಸುಮಾ, ಮುನ್ನಾಳ ಸೇವೆಮಾಡಿ ಮಾಡಿ ಸೊರಗಿ ಹೋಗಿದ್ದಳು. ಅವಳಿಗೂ ಅರವತ್ತು ವರ್ಷ. ಶರೀರ ಕುಗ್ಗಿತ್ತು. ಬೆನ್ನು ಬಾಗಿಸಿಕೊಂಡು ನಡೆಯುತ್ತಿದ್ದಳು.

'ಮುನ್ನಾಳಿಗೆ ಮೂವತ್ತೈದು ವರ್ಷ, ಈಗ ಸೊಂಟದಲ್ಲಿ ಶಕ್ತಿ ಕುಂದಿದೆ. ಅದರೆ ಮುನ್ನ ನನ್ನ ಮಗುವಲ್ಲವೇ' ಎಂದು ಹೇಳುತ್ತಾ ಮಗಳ ಕೆನ್ನೆಗೆ ಲೊಚಲೊಚ ಮುದ್ದುಕೊಟ್ಟಳು.

ಮದುವೆ ಆಗುತ್ತಿರುವ ನನ್ನ ಮಗಳನ್ನು ನೋಡಿ, ನನಗೇಕೆ ಈ ಹಿಂಸೆ, ಇಂಥ ಮಗಳು ಎಂದು ಅನಿಸಿರಬಹುದೇ ಎಂದು ಯೋಚಿಸಿದೆ. ಖಂಡಿತ ಅವಳು ಹಾಗೆಲ್ಲಾ ಅಂದುಕೊಳ್ಳುವುದಿಲ್ಲ ಎಂದು ಗೊತ್ತಿತ್ತು. ತಲೆ ಎತ್ತಿ ಅವಳ ಮುಖ ನೋಡಿದೆ. ಪ್ರಶಾಂತವಾಗಿದ್ದಳು. ಮದುವೆ ಮುಗಿಸಿಕೊಂಡು ಅವಳು ಹೊರಡುವ ಮೊದಲು ಅಂದಳು:

'ಹೇಮಾ, ನಾನು ಬದುಕಿರಬೇಕು. ನನ್ನ ಮುನ್ನಾಳನ್ನು ನನ್ನ ಬಿಟ್ಟರೆ ಯಾರು ನೋಡಿಕೊಳ್ಳುತ್ತಾರೆ. ಅವಳಿಗೆ ನಾನು ಬೇಕು, ನನಗೆ ಅವಳು ಬೇಕು' ಎಂದು ಹೇಳಿ ಹೋದಳು. ಅವಳ ಮಾತಿನಿಂದ ನಾನು ಅದೆಷ್ಟು ಹೊತ್ತು ಅತ್ತಿದ್ದೆನೋ ನನಗೇ ತಿಳಿಯದು. ಕುಸುಮಾ ಹಳ್ಳಿಗೆ ಹಿಂತಿರುಗಿ ಮೂರು ದಿವಸಗಳಾಗಿರಲಿಲ್ಲ. ಫೋನಿನಲ್ಲಿ ನನಗೆ ಕರೆ ಬಂತು. ಫೋನ್ ಮಾಡಿದವನು ಕುಸುಮಾಳ ಗಂಡ.

'ನೀವು ಕೂಡಲೇ ಹಳ್ಳಿಗೆ ಹೊರಟು ಬನ್ನಿ. ಮುನ್ನಾಳಿಗೆ ಹುಷಾರಿಲ್ಲ ನರಳುತ್ತಿದ್ದಾಳೆ. ಇವತ್ತೋ ನಾಳೆಯೋ ಅವಳು ಸಾಯಬಹುದು' ಎಂದು ಹೇಳಿ ರಿಸೀವರನ್ನು ಕೆಳಗಿಟ್ಟುಬಿಟ್ಟಿದ್ದ. ನಾನು ಹಳ್ಳಿಗೆ ಹೋಗದಿರಲು ಹೇಗೆ ಸಾಧ್ಯ. ಕರೆಬಂದ ಮೇಲೆ ಸುಮ್ಮನಿರಲು ಸಾಧ್ಯವೇ?